

ಪ್ಲೇಗ್ ಮಾರಿಗೆ ಬಲಿಯಾಗಿದ್ದಾರೆ; ಅದೂ ಕೇವಲ ಹದಿನೆಂಟು ತಿಂಗಳ ಅವಧಿಯಲ್ಲಿ!

ಜಗತ್ತನ್ನೇ ತತ್ತರಿಸುವ ಹಾಗೆ ಮಾಡಿದ ಪ್ಲೇಗ್ ಎಂಬ ಆ ಮಹಾಮಾರಿ ಸೃಜನಶೀಲ ಲೇಖಕರನ್ನೂ ಬಹುವಾಗಿ ಕಾಡಿದೆ. ಜಗತ್ತಿನ ಶ್ರೇಷ್ಠ ಲೇಖಕರಲ್ಲಿ ಒಬ್ಬನಾದ ಆಲ್ಬರ್ಟ್ ಕಮೂನ 'ದಿ ಪ್ಲೇಗ್' ಎನ್ನುವ ಕಾದಂಬರಿ ಅವುಗಳಲ್ಲಿ ಪ್ರಮುಖವಾದದ್ದು. ಪ್ಲೇಗ್ ರೋಗದ ಕ್ರೌರ್ಯವನ್ನು ಹೇಳುತ್ತಲೇ ಮನುಷ್ಯನ ದುರಾಸೆ, ಸಣ್ಣತನಗಳು, ಬೇಜವಾಬ್ದಾರಿ, ಮಹಾಸಂಕಷ್ಟ ಎದುರಾದಾಗ ಅವನು ಸಾಮೂಹಿಕವಾಗಿ ವರ್ತಿಸುವ ರೀತಿ ಎಲ್ಲದರ ಬಗ್ಗೆಯೂ ಆಳವಾಗಿ ಚಿತ್ರಿಸುವ ಈ ಕಾದಂಬರಿ ಇಂದಿಗೂ ಅಸಂಖ್ಯ ಸಾಹಿತ್ಯಪ್ರಿಯರಿಗೆ ಸಾರ್ವಕಾಲಿಕ ನೆಚ್ಚಿನ ಕೃತಿಯಾಗಿಯೇ ಉಳಿದಿದೆ.



Plague in 1665.

ದೃಶ್ಯಮಾಧ್ಯಮದಲ್ಲಿಯೂ ಈ ಭಯಂಕರ ಸಾಂಕ್ರಾಮಿಕದ ರೌದ್ರಾವತಾರವನ್ನು ಮರುಸೃಷ್ಟಿಸುವ ಪ್ರಯತ್ನ ನಡೆದಿದೆ. ಹಲವು ಸಿನಿಮಾಗಳ ಮೂಲಕ, ಸಾಕ್ಷ್ಯಚಿತ್ರಗಳ ಮೂಲಕ ಅಂದಿನ ಕಾಲದ ಪರಿಸ್ಥಿತಿಯನ್ನು ಜಗತ್ತಿನ ಮುಂದೆ ತೆರೆದಿಡಲು ಯತ್ನಿಸಲಾಗಿದೆ. ಅವುಗಳಲ್ಲಿ ಬಹುಮುಖ್ಯವಾಗಿರುವುದು 'ದಿ ಗ್ರೇಟ್ ಪ್ಲೇಗ್' ಎಂಬ ಸಾಕ್ಷ್ಯಚಿತ್ರ.

ಇಂಗ್ಲೆಂಡಿನಲ್ಲಿ ಪ್ಲೇಗ್ ಉಲ್ಬಣಗೊಂಡ ಕಾಲಾವಧಿಯಲ್ಲಿ ಅಲ್ಲಿಯೇ ಇದ್ದು ಅಲ್ಲಿನ ದುರಂತಗಳಿಗೆಲ್ಲ ಸಾಕ್ಷಿಯಾಗಿದ್ದ ಸ್ಯಾಮ್ಯುಯೆಲ್ ಪೀಪ್ಸ್ ಎಂಬ ಗಣ್ಯ ವ್ಯಕ್ತಿಯೊಬ್ಬ ತಾನು ಪ್ರತಿದಿನ ಕಂಡಿದ್ದನ್ನು ಡೈರಿಯಲ್ಲಿ ಬರೆದಿಡುತ್ತಿದ್ದ. ಅದು ಅಲ್ಲಿನ ಸಾಮಾನ್ಯ ಜನರು ಪ್ಲೇಗ್ ಎಂಬ ಮಾರಿಯಿಂದ ಹೇಗೆಲ್ಲ ತತ್ತರಿಸಿಹೋದರು ಎಂಬುದನ್ನು ಜಗತ್ತಿಗೆ ತೋರಿಸುವ ಪ್ರಮುಖ ದಾಖಲೆಯಾಗಿತ್ತು. ಆದರೆ ಈ ದಾಖಲೆಯನ್ನು ನೂರಾರು ವರ್ಷಗಳ ಕಾಲ ಇಂಗ್ಲೆಂಡಿನ ಚರ್ಚ್ ಹೊರಜಗತ್ತಿಗೆ ಕೊಡದೆ ಬಚ್ಚಿಟ್ಟುಕೊಂಡಿತ್ತು. ಎಷ್ಟೋ ವರ್ಷಗಳ ನಂತರ ಸಿಕ್ಕ ಈ ದಾಖಲೆಗಳು ಮತ್ತು ಆಗಿನ ಕಾಲಕ್ಕೆ ಪ್ರತಿ ವಾರ ಸ್ಥಳೀಯ ಆಡಳಿತ ಪ್ರಕಟಿಸುತ್ತಿದ್ದ ಮರಣಪತ್ರಗಳನ್ನು ಆಧಾರವಾಗಿ ಇಟ್ಟುಕೊಂಡು, 'ಕಾಕ್ ಆ್ಯಂಡ್ ಕೀ ಅಲೇ' ಎಂಬ ವಲಸಿಗರ ಬೀದಿಯ ನಿವಾಸಿಗಳು ಪ್ಲೇಗ್‌ನಿಂದ ಅನುಭವಿಸಿದ ಸಂಕಷ್ಟ ಮತ್ತು ಜೀವನಷ್ಟಗಳನ್ನು ಕಟ್ಟಿಕೊಡುವ ಪ್ರಯತ್ನವನ್ನು 'ದಿ ಗ್ರೇಟ್ ಪ್ಲೇಗ್' ಡಾಕ್ಯುಮೆಂಟರಿ ಮಾಡುತ್ತದೆ.

ವಲಸಿಗರೇ ಹೆಚ್ಚಾಗಿ ತುಂಬಿಕೊಂಡಿದ್ದ 'ಕಾಕ್ ಆ್ಯಂಡ್ ಕೀ ಅಲೇ' ಚಿತ್ರದಲ್ಲಿ ಕಮ್ಮಾರ, ಯಂತ್ರ ರಿಪೇರಿ ಮಾಡುವವರು, ಸಮಾಧಿಗೆ ಹೊಂಡ ತೋಡುವವರು, ಪಬ್ ನಡೆಸುತ್ತಿರುವವರು, ಸೆಕ್ಯೂರಿಟಿ ಹೀಗೆ ತಳ ಸಮುದಾಯದ ಜನರೇ ಹೆಚ್ಚಾಗಿ ವಾಸಿಸುತ್ತಿದ್ದುದು. ಸೇಂಟ್ ಡನ್‌ಸ್ಟನ್ ಚರ್ಚ್‌ನ ವಾರ್ಡನ್ ಹೆನ್ರಿ ಈ ಬೀದಿಯ 'ಬಡವರ ಪರಿಹಾರ ನಿಧಿ'ಯ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದವನು. ಚರ್ಚ್‌ನ ಸಿಬ್ಬಂದಿ ಮತ್ತು ಬೀದಿಯ ಕಾರ್ಮಿಕರಿಗೆ ಯಾವ ಕಾರಣಕ್ಕೆ ಎಷ್ಟು ಹಣ ಕೊಟ್ಟಿದ್ದೇನೆ ಎಂಬುದನ್ನೆಲ್ಲ ಅವನು ವಿವರವಾಗಿ ಬರೆದಿಟ್ಟಿದ್ದಾನೆ. ಆ ದಾಖಲೆಯೂ ಅಂದಿನ ಸಾಮಾಜಿಕ ವ್ಯವಸ್ಥೆ, ವರ್ಗ ವ್ಯವಸ್ಥೆಯನ್ನು ಅರಿತುಕೊಳ್ಳಲು ಬಹುಮುಖ್ಯ ದಾಖಲೆಯಾಗಿದೆ.

1665ರ ಮಧ್ಯದ ಹೊತ್ತಿಗೆ ಇಂಗ್ಲೆಂಡಿನ ಬೇರೆ ಬೇರೆ ಪ್ರದೇಶಗಳಿಂದ ಪ್ಲೇಗ್‌ನಿಂದ ಜನರು ಸಾಯುತ್ತಿರುವುದು ವರದಿಯಾಗುತ್ತಿತ್ತು. ಆಗ ರೋಗ ಯಾವುದರಿಂದ ಹೇಗೆ ಹರಡುತ್ತದೆ ಎಂಬ ಅರಿವೂ ಇರಲಿಲ್ಲ. ಅದು ಪ್ರಾಣಿಗಳಿಂದ ಹರಡಬಹುದು ಎಂಬ ಕಾರಣಕ್ಕೆ ಲಾರ್ಡ್ ಮೇಯರ್ ನಾಯಿ ಮತ್ತು ಬೆಕ್ಕುಗಳನ್ನು ಸಾಮೂಹಿಕವಾಗಿ ಸಾಯಿಸುವುದಕ್ಕೆ ಆದೇಶ ನೀಡಿದ. ಇದರಿಂದ ಆ ಕಾಲಕ್ಕೆ ಇಂಗ್ಲೆಂಡ್‌ನಲ್ಲಿ ಸುಮಾರು ನಲ್ವತ್ತು ಸಾವಿರ ಸಾಕುಪ್ರಾಣಿಗಳನ್ನು ಸಾಯಿಸಲಾಯಿತು ಎನ್ನುವ ಅಂದಾಜಿದೆ. ಶ್ರೀಮಂತರು ನಗರಗಳನ್ನು ಬಿಟ್ಟು ಸುರಕ್ಷಿತ ಜಾಗಕ್ಕೆ ವಲಸೆ ಹೋಗಲಾರಂಭಿಸಿದ್ದರು.

ಇಷ್ಟೆಲ್ಲ ನಡೆಯುತ್ತಿದ್ದರೂ ಇನ್ನೂ ಕಾಕ್ ಆ್ಯಂಡ್ ಕೀ ಅಲೇ ಬೀದಿಯಲ್ಲಿ ಪ್ಲೇಗ್ ಲಕ್ಷಣಗಳು ಗೋಚರಿಸಿರಲಿಲ್ಲ. 1665ರ ಜೂನ್ 15ರಂದು ಆ ಬೀದಿಯಲ್ಲಿ ಮೊದಲ ಪ್ಲೇಗ್ ಪ್ರಕರಣ ಪತ್ತೆಯಾಯಿತು. ಅದಕ್ಕೆ ಬಲಿಯಾಗಿದ್ದು ಬಡ ವಿಧವೆ ರೆಬೆಕಾ ಆ್ಯಂಡ್ರೂಸ್. ಐದಾರು ವರ್ಷದ ತನ್ನ ಮಗನೊಂದಿಗೆ ವಾಸಿಸುತ್ತಿದ್ದ ಅವಳಿಗೆ ಪ್ಲೇಗ್ ಇರುವುದು ಖಚಿತವಾಗುತ್ತಿದ್ದಂತೆಯೇ ಮಗನೊಟ್ಟಿಗೇ ಅವಳನ್ನು ಮನೆಯೊಳಗೆ ಕೂಡಿಹಾಕಿ ಹೊರಗಿನಿಂದ ಬೀಗ ಹಾಕಲಾಯಿತು.